ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	619
ಸದಸ್ಯರ ಹೆಸರು	:	ಶ್ರೀ ಆರ್.ಬಿ ತಿಮ್ಮಾಪೂರ
ಉತ್ತರಿಸಬೇಕಾದ ದಿನಾಂಕ	:	11.03.2020
ಉತ್ತರಿಸಬೇಕಾದ ಸಚಿವರು	:	ಸಮಾಜ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ನ್ಯಾಯಮೂರ್ತಿ ಸದಾಶಿವ ಆಯೋಗವನ್ನು ರಚನೆ ಮಾಡಿದ್ದು ಯಾವಾಗ : ಆಯೋಗವು ವರದಿಯನ್ನು ನೀಡಲು ತೆಗೆದುಕೊಂಡ ಕಾಲಾವಕಾಶವೆಷ್ಟು;	ಸರ್ಕಾರದ ಆದೇಶ ಸಂಖ್ಯೆ: ಸಕಇ 227 ಎಸ್‌ಎಡಿ 2003 ದಿನಾಂಕ:24.09.2005 ರನ್ವಯ ನ್ಯಾಯಮೂರ್ತಿ ಸದಾಶಿವ ಆಯೋಗವನ್ನು ರಚನೆ ಮಾಡಲಾಗಿದ್ದು, ಸದರಿ ಆಯೋಗ ಈಗಾಗಲೇ ಸರ್ಕಾರಕ್ಕೆ ವರದಿ ನೀಡಿರುತ್ತದೆ.
ಆ	ಆಯೋಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿ ಮತ್ತು ಇತರೆ ಸಿಬ್ಬಂದಿ ವರ್ಗಗಳ ಸಂಖ್ಯೆ ಎಷ್ಟು; (ದರ್ಜೆವಾರು ವಿವರ ನೀಡುವುದು)	ಆಯೋಗವು ಈಗಾಗಲೇ ವರದಿ ನೀಡಿದ್ದು, ಸದರಿ ಆಯೋಗವು ಈಗ ಅಸ್ತಿತ್ವದಲ್ಲಿರುವುದಿಲ್ಲ.
ಇ	ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು ಯಾವಾಗ; ಆಯೋಗವು ನೀಡಿರುವ ವರದಿಯನ್ನು ಜಾರಿಗೊಳಿಸಲು ಇರುವ ಅಡೆತಡೆಗಳೇನು; ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?	ಆಯೋಗವು 2012ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಸದರಿ ವರದಿಯನ್ನು ಸರ್ಕಾರವು ಯಥವತ್ತಾಗಿ ಅಥವಾ ಭಾಗಶಃವಾಗಿ ಒಪ್ಪಿಕೊಳ್ಳಬಹುದೇ ಅಥವಾ ಕೆಲವೊಂದು ಮಾರ್ಪಾಡುಗಳೊಂದಿಗೆ ಒಪ್ಪಿಕೊಳ್ಳಬಹುದೇ ಎಂಬುದರ ಬಗ್ಗೆ ಪರಿಶೀಲಿಸಿ ವರದಿ ನೀಡಲು ಸಚಿವ ಸಂಪುಟ ಉಪ ಸಮಿತಿಯನ್ನು ಈ ಹಿಂದೆ ರಚಿಸಲಾಗಿದ್ದು, ತದನಂತರ ಹೊಸ ಸರ್ಕಾರಗಳು ಅಸ್ತಿತ್ವಕ್ಕೆ ಬಂದಿರುವುದರಿಂದ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲು ಕ್ರಮ ಜರುಗಿಸಲಾಗುತ್ತಿದೆ. ಉಪ ಸಮಿತಿಯ ಶಿಫಾರಸ್ಸಿನ ಮೇರೆಗೆ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು.

ಸಕಇ 51 ಎಸ್‌ಎಡಿ 2020

(ಗೋವಿಂದ ಎಂ. ಕಾರಜೋಳ).

ಉಪ ಮುಖ್ಯ ಮಂತ್ರಿಗಳು ಹಾಗೂ ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಸಚಿವರು.